ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

**ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರ ನಡಾವಳಿಗಳು – 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ ಪ್ರಕರಣ 12(7) ರನ್ವಯ ಸ್ಪಷ್ಟೀಕರಣ**

ಪ್ರಸ್ತುತ: (ರಿತ್ವಿಕ್ ಪಾಂಡೆ)
ವಾಣಿಜ್ಯ ತೆರಿಗೆ ಆಯುಕ್ತರು,
ಕರ್ನಾಟಕ, ಬೆಂಗಳೂರು.

ವಿಷಯ: ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 1979 – ವೈದ್ಯಕೀಯ ಉಪಸಾಧನಗಳು, ವೆಂಟಿಲೇಟರ್‌ನ ಉಪಸಾಧನಗಳು, ಮ್ಯಾಡ್ ನಾಸಾಲ್ ಡಿವೈಸ್ 3 ಎಂ.ಎಲ್ ಸಿರಿಂಜು ಮತ್ತು ವೈದ್ಯಕೀಯ ಸಾಧನಗಳಿಗೆ ಅನ್ವಯವಾಗುವ ಪ್ರವೇಶ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಮಗಲ್ ಹೆಲ್ತ್‌ಕೇರ್ ಪ್ರೈ. ಲಿ. ನಂ. 34, 60ನೇ ರಸ್ತೆ, ಆರ್.ಎಂ.ವಿ. 2ನೇ ಹಂತ, ನಾಗಶೆಟ್ಟಿಹಳ್ಳಿ, ಬೆಂಗಳೂರು–560 094, ಇವರ ಪತ್ರ ದಿನಾಂಕ 21.07.2014 ಟಿನ್ ಸಂಖ್ಯೆ: 29140882441.

* * *

ಮೆ: ಮಗಲ್ ಹೆಲ್ತ್‌ಕೇರ್ ಪ್ರೈ. ಲಿ. ನಂ. 34, 60ನೇ ರಸ್ತೆ, ಆರ್.ಎಂ.ವಿ. 2ನೇ ಹಂತ, ನಾಗಶೆಟ್ಟಿಹಳ್ಳಿ, ಬೆಂಗಳೂರು – 560 094, ಟಿನ್ ಸಂಖ್ಯೆ: 29140882441 ಇವರು ಉಲ್ಲೇಖಿತ ಅರ್ಜಿಯಲ್ಲಿ "ವೈದ್ಯಕೀಯ ಉಪಸಾಧನಗಳು, ವೆಂಟಿಲೇಟರ್‌ನ ಉಪಸಾಧನಗಳು, ಮ್ಯಾಡ್ ನಾಸಾಲ್ ಡಿವೈಸ್ 3 ಎಂ.ಎಲ್ ಸಿರಿಂಜು ಮತ್ತು ವೈದ್ಯಕೀಯ ಸಾಧನ" ಗಳಿಗೆ ಅನ್ವಯವಾಗುವ ಪ್ರವೇಶ ತೆರಿಗೆ ದರದ ಕುರಿತು ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ ಪ್ರಕರಣ 12(7)ರ ಮೇರೆಗೆ, ವಾಣಿಜ್ಯ ತೆರಿಗೆಗಳ ಆಯುಕ್ತರು, ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ. ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ

ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

2. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆ: ಕೆಟಿಇಜಿ/ಸಿಎಲ್ಆರ್/ಸಿಆರ್–04/2015–16, ದಿ: 14–07–2015**

ಅಧಿಸೂಚಿತವಲ್ಲದ ಸರಕುಗಳಾದ ವೈದ್ಯಕೀಯ ಉಪಸಾಧನಗಳು, ವೆಂಟಿಲೇಟರ್‌ನ ಉಪಸಾಧನಗಳು, ಮ್ಯಾಡ್ ನಾಸಾಲ್ ಡಿವೈಸ್ 3 ಎಂ.ಎಲ್ ಸಿರಿಂಜು ಮತ್ತು ವೈದ್ಯಕೀಯ ಸಾಧನಗಳಿಗೆ ಪ್ರವೇಶ ತೆರಿಗೆ ಬಾಧ್ಯತೆ ಇರುವುದಿಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

(ರಿತ್ವಿಕ್ ಪಾಂಡೆ)
ವಾಣಿಜ್ಯ ತೆರಿಗೆ ಆಯುಕ್ತರು,
ಕರ್ನಾಟಕ, ಬೆಂಗಳೂರು.